# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1685 (1933) |
| ಸದಸ್ಯರ ಹೆಸರು | : ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 24.03.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರ ಬೆಳೆ ವಿಮೆ ಯೋಜನೆ ಜಾರಿಯಲ್ಲಿದೆಯೇ? 2025-26ನೇ ಸಾಲಿನಲ್ಲಿ ಎಷ್ಟು ರೈತರು ಬೆಳೆ ವಿಮೆ ಮಾಡಿಸಿಕೊಂಡಿದ್ದಾರೆ; (ವಿವರ ನೀಡುವುದು) | ಹೌದು, ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಜಾರಿಯಲ್ಲಿರುತ್ತದೆ.<br><br>2025-26ನೇ ಸಾಲಿನಲ್ಲಿ 981257 ರೈತರು ತೋಟಗಾರಿಕೆ ಬೆಳೆಗಳಿಗೆ ಬೆಳೆ ವಿಮೆ ಮಾಡಿಸಿಕೊಂಡಿದ್ದು, ವಿವರ ಈ ಕೆಳಗಿನಂತಿದೆ:- |

| ಕ್ರ. ಸಂ | ಜಿಲ್ಲೆ | ರೈತ ಅರ್ಜಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 6192 |
| 2 | ಬಳ್ಳಾರಿ | 248 |
| 3 | ಬೆಳಗಾವಿ | 10743 |
| 4 | ಬೆಂಗಳೂರು ಗ್ರಾಮಾಂತರ | 1209 |
| 5 | ಬೆಂಗಳೂರು ನಗರ | 57 |
| 6 | ಬೀದರ್ | 128 |
| 7 | ಚಾಮರಾಜನಗರ | 11 |
| 8 | ಚಿಕ್ಕಬಳ್ಳಾಪುರ | 4457 |
| 9 | ಚಿಕ್ಕಮಗಳೂರು | 86517 |
| 10 | ಚಿತ್ರದುರ್ಗ | 7304 |
| 11 | ದಕ್ಷಿಣ ಕನ್ನಡ | 443380 |
| 12 | ದಾವಣಗೆರೆ | 25037 |
| 13 | ಧಾರವಾಡ | 12873 |
| 14 | ಗದಗ | 82 |
| 15 | ಹಾಸನ | 14268 |
| 16 | ಹಾವೇರಿ | 30870 |
| 17 | ಕಲಬುರಗಿ | 125 |
| 18 | ಕೊಡಗು | 4531 |
| 19 | ಕೋಲಾರ | 9446 |
| 20 | ಕೊಪ್ಪಳ | 4756 |
| 21 | ಮಂಡ್ಯ | 16 |
| 22 | ಮೈಸೂರು | 6 |
| 23 | ರಾಯಚೂರು | 162 |
| 24 | ರಾಮನಗರ | 16864 |
| 25 | ಶಿವಮೊಗ್ಗ | 127417 |
| 26 | ತುಮಕೂರು | 18488 |
| 27 | ಉಡುಪಿ | 29387 |
| 28 | ಉತ್ತರ ಕನ್ನಡ | 100005 |

| | | |
|---|---|---|
| 29 | ವಿಜಯನಗರ | 1147 |
| 30 | ವಿಜಯಪುರ | 23174 |
| 31 | ಯಾದಗಿರಿ | 31 |
| | **ಮುಂಗಾರು ಒಟ್ಟು** | **9,78,931** |
| 1 | ಬೆಳಗಾವಿ | 43 |
| 2 | ಬೀದರ್ | 35 |
| 3 | ಕೊಪ್ಪಳ | 2248 |
| | **ಹಿಂಗಾರು ಒಟ್ಟು** | **2326** |
| **ಒಟ್ಟಾರೆ ( ಮುಂಗಾರು + ಹಿಂಗಾರು)** | | **981257** |

ಆ) ಯಾವ ಯಾವ ಬೆಳೆಗೆ ಎಷ್ಟು ವಿಮೆ ಹಣ ನಿಗಧಿಪಡಿಸಲಾಗಿದೆ; ಎಕರೆಗೆ ಯಾವ ರೀತಿ ಪರಿಹಾರ ನೀಡಲಾಗುತ್ತದೆ;

ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಒಳಪಡುವ ವಿವಿಧ ಬೆಳೆಗಳು ಮತ್ತು ಪ್ರತಿ ಎಕರೆಗೆ ನಿಗದಿಪಡಿಸಲಾದ ಒಟ್ಟು ವಿಮಾ ಮೊತ್ತ (Total sum insured) ಈ ಕೆಳಗಿನಂತಿದೆ:-

| **ಕ್ರ. ಸಂ** | **ಬೆಳೆಗಳು** | **ಒಟ್ಟು ವಿಮಾ ಮೊತ್ತ (ರೂ /ಎಕರೆ)** |
|---|---|---|
| 1 | ಮಾವು | 32375.56 |
| 2 | ದ್ರಾಕ್ಷಿ | 113314.45 |
| 3 | ದಾಳಿಂಬೆ | 51396.20 |
| 4 | ಪರಂಗಿ | 54229.06 |
| 5 | ಅಡಿಕೆ | 51800.89 |
| 6 | ಕರಿಮೆಣಸು | 19020.64 |
| 7 | ಹಸಿ ಮೆಣಸಿನಕಾಯಿ | 28733.31 |
| 8 | ಹೂಕೋಸು | 25091.06 |
| 9 | ಶುಂಠಿ | 52610.28 |
| 10 | ನಿಂಬೆ | 22662.89 |
| 11 | ವೀಳ್ಯದೆಲೆ | 47349.25 |

ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ವಿಮಾ ಪರಿಹಾರವನ್ನು ಈ ಕೆಳಗಿನಂತೆ ನೀಡಲಾಗುತ್ತದೆ:-

1. ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಒಟ್ಟು ವಿಮಾ ಮೊತ್ತ (Sum Insured) ವನ್ನು Scale of Finance ಆಧಾರದ ಮೇರೆಗೆ SLCCCI (State Level Coordination Committee on Crop Insurance) ಯ ಅನುಮೋದನೆಯೊಂದಿಗೆ ನಿಗಧಿಪಡಿಸಲಾಗುತ್ತದೆ.

2. ಕೇಂದ್ರ ಸರ್ಕಾರದಿಂದ empanel ಆದ ವಿಮಾ ಸಂಸ್ಥೆಗಳ ಪೈಕಿ ಟೆಂಡರ್ ಮೂಲಕ ಜಿಲ್ಲಾವಾರು

| | | |
|---|---|---|
| | | ಅತಿ ಕಡಿಮೆ ಪ್ರಿಮೀಯಂ ನಮೂದಿಸುವ (lowest weighted premium) ವಿಮಾ ಸಂಸ್ಥೆಯನ್ನು ಅನುಷ್ಠಾನ ವಿಮಾ ಸಂಸ್ಥೆಯಾಗಿ ಆಯ್ಕೆ ಮಾಡಲಾಗುತ್ತದೆ ಹಾಗೂ ಒಟ್ಟು ಪ್ರೀಮಿಯಂ ಮೊತ್ತ ನಿಗಧಿಪಡಿಸಲಾಗುತ್ತದೆ. ರೈತರು ಒಟ್ಟು ವಿಮಾ ಮೊತ್ತದ 5% ವಿಮಾ ಕಂತು ಪಾವತಿಸಬೇಕಾಗುತ್ತದೆ.<br><br>3. ವಿವಿಧ ವಿಮಾ ಘಟಕಗಳಲ್ಲಿ ಬೆಳೆಗಳನ್ನು ಅಧಿಸೂಚಿಸಿ, ಆಯಾ ವಿಮಾ ಘಟಕ/ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು/ ಹೋಬಳಿವಾರು ಟರ್ಮ್ ಶೀಟ್ ಗಳನ್ನು ಸಿದ್ಧಗೊಳಿಸಲಾಗುತ್ತದೆ.<br><br>4. ಆಯಾ ವಿಮಾ ಘಟಕ/ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಅಧಿಸೂಚಿತ ಮುಖ್ಯ (Reference) ಮತ್ತು ಬ್ಯಾಕಪ್ ಹವಾಮಾನ ಕೇಂದ್ರಗಳಲ್ಲಿ ದಾಖಲಾದ ಹವಾಮಾನ ಸೂಚ್ಯಂಕಗಳ ಆಧಾರದ ಮೇರೆಗೆ ಸಂಭವಿಸಬಹುದಾದ ಬೆಳೆ ನಷ್ಟವನ್ನು ಟರ್ಮ್ ಶೀಟ್‌ಗಳ ಪ್ರಕಾರ ಅಂದಾಜಿಸಲಾಗುತ್ತದೆ ಹಾಗೂ ಅದರಂತೆ ಋತುವಾರು ನೋಂದಾಯಿಸಲ್ಪಟ್ಟ ರೈತರಿಗೆ ವಿಮಾ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆ ವತಿಯಿಂದ ವಿತರಿಸಲಾಗುತ್ತದೆ. |
| ಇ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ರೈತರಿಗೆ ಬೆಳೆ ವಿಮೆಯ ಹಣವನ್ನು ನೀಡಲಾಗಿದೆ; (ವಿವರ ನೀಡುವುದು) | 2024-25ನೇ ಸಾಲಿಗೆ ಸಂಬಂಧಿಸಿದಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆವಿಗೆ ಒಟ್ಟು 2,99,593 ರೈತರಿಗೆ ರೂ.24993.96 ಲಕ್ಷ ಬೆಳೆ ವಿಮೆಯ ಹಣವನ್ನು ನೀಡಲಾಗಿದೆ.<br><br>2025-26ನೇ ಸಾಲಿಗೆ ಸಂಬಂಧಿಸಿದಂತೆ, ದಕ್ಷಿಣ ಕನ್ನಡ ಜಿಲ್ಲೆಯ ಟರ್ಮ್ ಶೀಟ್‌ನಲ್ಲಿ ಬೆಳೆಗಳ ರಿಸ್ಕ್ ಅವಧಿಯು ಇನ್ನೂ ಮುಗಿಯದ ಕಾರಣ, ರಿಸ್ಕ್ ಅವಧಿ ಮುಗಿದ ನಂತರ ನಿಯಮಾನುಸಾರ ಲೆಕ್ಕಾಚಾರ ಕೈಗೊಂಡು ವಿಮಾ ಕಂಪೆನಿ ಮೂಲಕ ಅರ್ಹ ರೈತರಿಗೆ ವಿಮೆ ಪರಿಹಾರ ಮಾಡಲಾಗುವುದು. |
| ಈ) | ಬೆಳೆ ವಿಮೆ ಯಾವಾಗ ಮಾಡಿಕೊಳ್ಳಬೇಕೆಂಬ ಮಾರ್ಗಸೂಚಿಗಳಿವೆಯೇ?(ವಿವರ ನೀಡುವುದು) | ಹೌದು, ವಿವರ ಈ ಕೆಳಗಿನಂತಿದೆ:-<br><br>1. ಬೆಳೆ ವಿಮೆ ಮಾಡಲು ಆಯಾ ಜಿಲ್ಲೆಗಳಲ್ಲಿ ಅಧಿಸೂಚಿಸಲಾದ ತೋಟಗಾರಿಕೆ ಬೆಳೆಗಳಿಗೆ ಅಂತಿಮಗೊಳಿಸಲಾದ ಟರ್ಮ್ ಶೀಟ್ ರಂತೆ ರಿಸ್ಕ್ ಅವಧಿಯ ಪ್ರಾರಂಭದ ಹಿಂದಿನ ದಿನವನ್ನು ಪರಿಗಣಿಸಿ ಅವಕಾಶ ಕಲ್ಪಿಸಲಾಗುತ್ತದೆ. |

| | | |
|---|---|---|
| | | 2. ಬೆಳೆ ವಿಮೆಯನ್ನು ಪ್ರತಿ ವರ್ಷ ರೈತರು ಜಿಲ್ಲೆ ಮತ್ತು ಬೆಳೆಗೆ ಅನುಗುಣವಾಗಿ ಸಾಮಾನ್ಯವಾಗಿ ಮುಂಗಾರು ಹಂಗಾಮಿಗೆ ಜುಲೈ ರಿಂದ ಆಗಸ್ಟ್ ಮಾಹೆಯವರೆಗೆ ಹಾಗೂ ಹಿಂಗಾರು ಹಂಗಾಮಿನ ಬೆಳೆಗಳಿಗೆ ಸೆಪ್ಟೆಂಬರ್ ಮಾಹೆಯಲ್ಲಿ ಬೆಳೆ ವಿಮೆಯನ್ನು ಮಾಡಿಸಿಕೊಳ್ಳಬಹುದಾಗಿರುತ್ತದೆ.<br><br>3. ಈ ಸಂಬಂಧ ಪ್ರತಿ ವರ್ಷ ಅಧಿಸೂಚನೆ ಹೊರಡಿಸಲಾಗುತ್ತದೆ.<br><br>4. ರೈತರು ಬೆಳೆ ವಿಮೆಯನ್ನು ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರ (Common Service Centre-CSC) ಮತ್ತು ಗ್ರಾಮ ಒನ್ ಗಳಲ್ಲಿ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. |

ಸಂಖ್ಯೆ: HORTI 163 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು